International Journal for Multidisciplinary Research (IJFMR)

E-ISSN: 2582-2160 ● Website: www.ijfmr.com ● Email: editor@ijfmr.com

# ವಚನ ಪ್ರತಿಭೆ: ಬೌದ್ಧಿಕ ಪ್ರತಿಭಟನೆಯ ನಿಲುವುಗಳು

**ಪ್ರೊ. ಎಸ್. ಎಂ. ಗಂಗಾಧರಯ್ಯ**

ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಪ್ರಸ್ತಾವನೆ (Abstract)**

**ಇಂದು ವಚನಾಧ್ಯಯನದ ಮೂಲತತ್ವಗಳನ್ನು ಅಧ್ಯಯನಿಸುವ ಸಂದರ್ಭದಲ್ಲಿ ವಚನಗಳ ಹುಟ್ಟಿನ ಸಂದರ್ಭವನ್ನು ಕುರಿತು ತೀವ್ರವಾದ ಚರ್ಚೆಯನ್ನು ಆರಂಭಿಸುವುದೊಳಿತು. ಏಕೆಂದರೆ ವಚನ ಪ್ರತಿಭೆಯ ಸಾರ್ಥಕ್ಯತೆಯು ಅವುಗಳು ಅಭಿವ್ಯಕ್ತಿಸುವ ವೈಚಾರಿಕ ಪ್ರತಿಮೆಗಳಲ್ಲಿ ನಿಂತಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವಚನವೆನ್ನುವ ಪ್ರಕಾರವೇ ವಿಶಿಷ್ಟವಾದುದು. ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಅವೆರಡಕ್ಕಿಂತಲೂ ಸರಳವಾದ ಪದ್ಯದ ಲಾಲಿತ್ಯವನ್ನು, ಗದ್ಯದ ಹೃದ್ಯತನವನ್ನು ಹೊಂದಿದ ಅಪರೂಪದ ಸಾಹಿತ್ಯಕ ಪ್ರಕಾರವಾಗಿ ಒದಗಿಬರುತ್ತದೆ. ಅದರ ರಚನೆಗಳಲ್ಲಿ ಸೂತ್ರರೂಪವನ್ನು ಕಾಣುತ್ತೇವೆ. ಪ್ರತಿ ವಚನವು ದರ್ಶನಶಾಸ್ತ್ರದ ಮೂರು ವೈಲಕ್ಷಣಗಳಾದ ಈಶ್ವರ, ಜೀವ, ಜಗತ್ತು ಇವುಗಳನ್ನು ಕುರಿತು ಹೇಳುತ್ತದೆ. ಈ ಮೂರರ ಸಂಬಂಧವನ್ನು ಮೂಲಭೂತವಾಗಿಟ್ಟುಕೊಂಡು ತರ್ಕಬದ್ಧವಾಗಿ ಅನುಭವಸಮ್ಮತವಾಗಿ ಹಿತಮಿತ ಭಾಷೆಯ ಪರಿಧಿಯಲ್ಲಿ ಕಾವ್ಯಮಯವಾಗಿ ಪ್ರತಿಮೆಗಳನ್ನು ರೂಪಿಸುತ್ತಾ ಅಭಿವ್ಯಕ್ತಿಗಳನ್ನು ಪ್ರಕಟಿಸುತ್ತದೆ. ಪರಸ್ಪರ ಸಂಬಂಧವನ್ನು ಹೊಂದಿದ್ದರೂ ಸಂಬಂಧವಿಲ್ಲದಂತೆ ಬಿಡಿಬಿಡಿಯಾದ ಮುಕ್ತಕಗಳಂತೆ ಅಭಿವ್ಯಕ್ತಿಯಾಗುತ್ತವೆ. ಇಂಥ ವಚನಗಳನ್ನು ಮರು ಅಧ್ಯಯನಿಸುವ ಚಿಂತನೆ ಮೇಲಿಂದ ಮೇಲೆ ನಡೆಯುತ್ತಿರುವುದು ಸ್ವಾಗತಾರ್ಹ ಸಂಗತಿ. ವಚನಸಾಹಿತ್ಯವು ಶ್ರೇಷ್ಠ ಸೈದ್ಧಾಂತಿಕ ನಿಲುವನ್ನು ಹೊಂದಿದೆ. ಅದರ ಉದ್ದೇಶ ಕಾವ್ಯಸೃಷ್ಟಿಯಲ್ಲ. ಅದು ಒಂದು ಬೌದ್ಧಿಕ ಚಳುವಳಿ. ಆ ಚಳುವಳಿಯನ್ನು ಕೇವಲ ಭಾಷಿಕ ನೆಲೆಯಲ್ಲಿ ಮಾಡದೆ ವೈಚಾರಿಕ ನೆಲೆಯಲ್ಲಿ ಅದರಲ್ಲೂ ಕೂಡ ಪ್ರತಿಭಟನೆಯ ನೆಲೆಯಲ್ಲಿಯೇ ವಚನ ಸಾಹಿತ್ಯವು ಹುಟ್ಟಿಕೊಂಡಿತು ಎನ್ನುವುದು ಈ ಸಂಶೋಧನಾಲೇಖನದ ಆಶಯ.**

12ನೆಯ ಶತಮಾನದಲ್ಲಿ ಈ ಮಾದರಿಯ ಮುಖಾಂತರ ಬದಲಾವಣೆಯ ಎಲ್ಲ ಪ್ರಯತ್ನಗಳನ್ನು ಮಾಡಲು ವಚನಪ್ರತಿಭೆಯು ಸ್ವತಂತ್ರವಾಗಿ ನಿಲ್ಲುತ್ತದೆ. ಜನತೆಯ ಆಡಂಬರದ ಬದುಕನ್ನು ಹಾಗೂ ಅದರಿಂದ ಉಂಟಾಗುವ ಸಾಮಾಜಿಕ ವಿಸಂಗತಿಗಳನ್ನು ಖಂಡಿಸಲು ವಚನ ಮೀಮಾಂಸೆಯು ತೊಡಗುತ್ತದೆ. ಅವರ ಬದುಕಿನಲ್ಲಿ ಇಡಿಕಿರಿದಿರುವ ಸಾಮಾಜಿಕ ವಿಸಂಗತಿಗಳನ್ನು ಹಾಗೂ ಅಂತರಂಗದಲ್ಲಿ ಶುದ್ಧಿಯನ್ನು ಪ್ರತಿಷ್ಠಾಪಿಸುವ ಲೋಕದ ಸೇವಕನಂತೆ ವಚನಪ್ರತಿಭೆ ಮೇಲೆದ್ದುಬರುತ್ತದೆ. ಸ್ಥಾನಮಾನಗಳನ್ನು ಗಳಿಸುವುದಕ್ಕಾಗಲಿ, ಅಧಿಕಾರ ಪದವಿಗಳನ್ನು ಹೊಂದುವುದಕ್ಕಾಗಲಿ, ಬಿರುದು ಬಾವಲಿಗಳನ್ನು ಪಡೆದುಕೊಳ್ಳುವುದಕ್ಕಾಗಲಿ ಇಂತಹ ಲೌಕಿಕ ಅಪೇಕ್ಷೆಯ ಚಟುವಟಿಕೆಗಳಿಂದ ಹಿಂದೆ ಸರಿದು ಸ್ವತಂತ್ರ ಪ್ರಣಾಳಿಯನ್ನು ವ್ಯಕ್ತಪಡಿಸುತ್ತದೆ. ಬ್ರಹ್ಮಪದವಿಯನೊಲ್ಲೆ,

ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯ, ಸದ್ಭಕ್ತರ ಪಾದವನರಿದಿಪ್ಪ, ಮಹಾಪದವಿಯನೊಂದನ್ನೇ ಕರುಣಿಸಾ, ಸೆರಗೊಡ್ಡಿ ಬೇಡುವ ಕೂಡಲಸಂಗಮದೇವ -ಎನ್ನುವ ಮಾತಿನಲ್ಲಿರುವ ಮರ್ಮ ಅಭಿನಂದನೀಯವಾದುದು.

ಪದವಿಗಳಿಗಾಗಿ ಬೌದ್ಧಿಕ ಅಪೇಕ್ಷೆಗಳಿಗಾಗಿ ಸಮಾಜದಲ್ಲಿ ಉನ್ನತ ಮಟ್ಟದ ಸ್ಥಾನಗಳನ್ನು ಹೊಂದಲಿಕ್ಕಾಗಿ ಮಾಡುವ ಕರ್ಮವೂ ಇದಲ್ಲ ಎನ್ನುವ ಧಾರ್ಷ್ಟ್ಯತನ ವಚನಕಾರನಲ್ಲಿದೆ. ವಚನಸಾಹಿತ್ಯ ಲೋಕವನ್ನು ತಿದ್ದಿ ಶುದ್ಧೀಕರಣ ಮಾಡಲು ಪರಮಧ್ಯೇಯವನ್ನಿಟ್ಟುಕೊಂಡು ಕಳೆದ ಶತಮಾನದಲ್ಲಿ ಆಧುನಿಕ ವಚನಾಭಿಮಾನಿಗಳನ್ನು ಈ ದಿಸೆಯಲ್ಲಿ ಅಭಿನಂದಿಸಬೇಕು. ವಚನಪ್ರತಿಭೆ ಅಭಿವ್ಯಕ್ತಿಯಾದದ್ದು ಯಾರಿಗಾಗಿ ಎನ್ನುವ ಪ್ರಶ್ನೆ ಏಳದಿರದು. ವಚನಕಾರರೇ ತಿಳಿಸುವಂತೆ ಅದು ಪಾಪಿಗಳಿಗಾಗಿ, ಪಾಪಿಗಳನ್ನು ಪುಣ್ಯವಂತರನ್ನಾಗಿ ಮಾಡಬೇಕೆನ್ನುವುದು ಅವರ ಅಭಿಪ್ರಾಯ. ಅಷ್ಟೇ ಅಲ್ಲ ಅದೊಂದು ಎದೆಗಾರಿಕೆಯ ಮನೋಭಾವ. 'ಎಲವೋ ಎಲವೋ, ಪಾಪಕರ್ಮವ ಮಾಡಿದವನೆ, ಪಾಪಕರ್ಮ ಬಿಟ್ಟು ಓಡುವವು ಕರ್ಮ, ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೇ, ಇದ್ದಾವು ಒಮ್ಮೆ ಶರಣು ಎನ್ನು ಕೂಡಲಸಂಗಮ ದೇವಂಗೆ' -ಇಲ್ಲಿ ವಚನಸಾಹಿತ್ಯವು ಪ್ರಾಯಶ್ಚಿತ್ತಕ್ಕೆ ಬದಲು ಪಶ್ಚಾತ್ತಾಪವನ್ನು, ಪಾಪಪರಿಹಾರಕ್ಕೆ ಅರ್ಥವನ್ನು ಕಲ್ಪಿಸಿಕೊಡುತ್ತಾ ಹೋಗುತ್ತದೆ. ಈ ಎಲ್ಲ ಕಾರಣಗಳಿಂದ ವಚನಸಾಹಿತ್ಯವು ಪಾಪಿಗಳಿಗೆ ಪ್ರಾಯಶ್ಚಿತ್ತದ ದಂಡವನ್ನು ಮಾತ್ರ ನೀಡುತ್ತದೆ. ಪಶ್ಚಾತ್ತಾಪದ ಮಂಗಳಸ್ನಾನವನ್ನು ಮಾಡಿಸಿ ಶಿವಾಚಾರ್ಯ ದೀಕ್ಷೆಯನ್ನು ನೀಡುತ್ತದೆ. ಹೊಸ ಜನ್ಮವನ್ನು ಪಡೆದಷ್ಟು ವಿವೇಕವು ಅದರಿಂದ ಸಾಧ್ಯವಾಗುತ್ತದೆ. ಜಗತ್ತಿಗೆ ವಚನ ಪ್ರತಿಭೆಯು ನೀಡುವ ಮಹತ್ವದ ಕೊಡುಗೆಗಳಲ್ಲಿ ಪಶ್ಚಾತ್ತಾಪವೂ ಹಾಗೂ ಪ್ರಾಯಶ್ಚಿತ್ತವೂ ಒಂದಾಗಿದೆ. ವಚನಪ್ರತಿಭೆಯ ಸಶಕ್ತ ಆಲೋಚನೆಗಳು ಮಾನವನ ಬದುಕಿನ ಧ್ರುವೀಕರಣಕ್ಕೆ ಸಾಧ್ಯವಾಗುವ ಅವಕಾಶಗಳನ್ನು ಕಲ್ಪಿಸಿಕೊಡುತ್ತವೆ. ಶರಣರ ವಚನಗಳನ್ನು ಆರಾಧ್ಯ ಮನೋಭಾವದಿಂದ ಸ್ವೀಕರಿಸಿದವನು ಎಷ್ಟೇ ಪಾಪಕರ್ಮಗಳನ್ನು ಮಾಡಿದ್ದರೂ ಅವನು ಪರಿವರ್ತಿತವಾಗುವ ಒಳ್ಳೆಯತನದೆಡೆ ಧೃವೀಕರಣಕ್ಕೆ ಒಳಗಾಗುವ ಸಾಧ್ಯತೆಯೇ ಹೆಚ್ಚು. ಆದುದರಿಂದ

ಆದ್ಯರ ವಚನ ಪರುಷ ಕಂಡಯ್ಯ
ನಂಬಲೊಡನೆ ವಿಜಯ ನೋಡಯ್ಯ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ
ಬೇವ ಸವಿದಂತೆ

-ಎನ್ನುವಲ್ಲಿ ಪಾಪಿಗಳನ್ನು ಪುಣ್ಯವಂತರನ್ನಾಗಿಸುವ ಇಹಕ್ಕೆ ಸಲ್ಲುವವರಂಥವರನ್ನಾಗಿಸುವ ದರ್ಶನದ ಕಾಣ್ಕೆ ಅವರದ್ದು. ಮನುಷ್ಯನು ಬದುಕಿನಲ್ಲಿ ವಿಭಿನ್ನ ಪ್ರಲೋಭನೆಗಳಿಗೆ ಬಿದ್ದು ತಪ್ಪುಗಳನ್ನು ಮಾಡಬಹುದು. ಅಥವಾ ತಪ್ಪುಗಳನ್ನು ಮಾಡದೆಯೂ ಇರಬಹುದು. ಇಂತಹ ತತ್ವಶಾಸ್ತ್ರೀಯ ನೆಲೆಯಿಂದ ವಚನಗಳನ್ನು ಅಧ್ಯಯನಿಸಲು ಆರಂಭಿಸಿದರೆ, ಪೂರ್ಣ ಹಾಗೂ ಪುಣ್ಯಜೀವನದ ಪ್ರಾಪ್ತಿಗೆ ವಚನಸಾಹಿತ್ಯದ ಕೊಡುಗೆ ಅದ್ವಿತೀಯವೆಂದೆನಿಸುತ್ತದೆ. ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕು. ಇದು ವಚನ ಪ್ರತಿಭೆ ಲೋಕಸಹಿತ ಸಾಧನೆಯ ದಿವ್ಯಮಾರ್ಗವೆಂದು ಕರೆದುಕೊಳ್ಳುತ್ತದೆ. ಮಾನವನ ನಡೆಯನ್ನು ತಿದ್ದಲು ವೇದಗಳ ಕಾಲದಿಂದ ಇಂದಿನವರೆಗೂ ಅನೇಕ ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಉಪನಿಷತ್ ದರ್ಶನಗಳು

ಭಾರತೀಯ ಪರಿಸರದಲ್ಲಿ ಮೊಟ್ಟಮೊದಲ ಪ್ರಯತ್ನಗಳಾಗಿ ಕಂಡುಬರುತ್ತವೆ. ಆದರೆ ಉಪನಿಷತ್ ಮೌಲ್ಯಗಳನ್ನು ಜನತೆಗೆ ತಿಳಿಯಹೇಳುವ ವರ್ಗ ಸ್ವಾರ್ಥ, ಭ್ರಷ್ಟತನ ಹಾಗೂ ಅಸಮಾನ ಮತ್ತು ಅನಾರೋಗ್ಯಕರ ಮನಸ್ಸಿನಿಂದ ಆ ಪ್ರಯತ್ನಗಳು ಸಮಾಜಮುಖಿಯಾಗಲಿಲ್ಲ. ತಾಪತ್ರಯಗಳನ್ನು ದೂರವಿಡಲು ಸಾಧ್ಯವಾಗಲಿಲ್ಲ. ಹಾಗೆ ನೋಡಿದರೆ, ತಾಪತ್ರಯಗಳ ಪರಿಕಲ್ಪನೆ ಬರುವುದು ಉಪನಿಷತ್ತುಗಳಲ್ಲಿಯೆ. ಉಪನಿಷತ್‌ಗಳು ತಿಳಿಸುವ ಸಂಹಿತೆಗಳಂತೆ ಹೊರಬರುವ ಆಲೋಚನಾ ಕ್ರಮವು ವಚನಕಾರರಿಗೆ ಹೊಸತನದ್ದು. ಸಾಮಾನ್ಯವಾಗಿ ಮಾನವನ ಅಂತರಂಗವನ್ನು ಪರಿವರ್ತಿಸುವುದು ತುಸು ಕಷ್ಟದ ಕೆಲಸ. ಮೂಲ ಪ್ರವೃತ್ತಿಗಳು ಬದಲಾಗುವುದೇ ಇಲ್ಲ. ವ್ಯಕ್ತಿಯಲ್ಲಿರುವ ಬೌದ್ಧಿಕ ದಾರಿದ್ರ್ಯ ಮಾನಸಿಕ ದಾರಿದ್ರ್ಯ, ದೈಹಿಕ ದಾರಿದ್ರ್ಯಗಳು ಅಲ್ಲದೆ ಅನಾರೋಗ್ಯಕರ ಮನಸ್ಥಿತಿ, ನೂರೆಂಟು ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಸಂಕೀರ್ಣ ಹಂತವನ್ನು ತಲುಪುತ್ತದೆ. ವಚನವು ಇಂತಹ ದಾರಿದ್ರ್ಯ ದಿಂದ ಹೊರತರುವ ಮೊದಲ ಪ್ರಯತ್ನದಿಂದ ತನ್ನ ಸೈದ್ಧಾಂತಿಕ ನಿಲುವನ್ನು ಆರಂಭಿಸುತ್ತದೆ.

ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು
ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು...
......................

-ಎನ್ನುವ ವಚನದ ಸಾಲುಗಳನ್ನು ಮತ್ತೆ ಮತ್ತೆ ಪರೀಕ್ಷಿಸಿ ನೋಡಬೇಕಾಗಿದೆ. ಅಜ್ಞಾನ ನಿವಾರಣೆಗೆ ಶರಣರು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ವೇದ ಉಪನಿಷತ್ತು, ಶಾಸ್ತ್ರ, ಆಗಮಗಳನ್ನು ಪರೀಕ್ಷಿಸಿ ನೋಡಲು ಸಮಾಜದ ಮುಂದೆ ಸಾರ್ವಜನಿಕ ಚರ್ಚೆಗೆ ಅದನ್ನು ಬಿಡುತ್ತಾರೆ. ಅವರ ಅಭಿಪ್ರಾಯದಲ್ಲಿ ಜ್ಞಾನವು ಕ್ರಿಯೆಯ ಜೊತೆಗೆ ಸೇರಿಕೊಂಡಾಗ ಉಂಟಾಗುವ ಫಲಿತಾಂಶವೇ ವಚನ ಪ್ರತಿಭೆಯ ಆಶಯವಾಗಿ ಕಾಣುತ್ತದೆ. ಇಂಥ ಸಂದರ್ಭಗಳಲ್ಲಿ ಮಾನವ ಪ್ರಗತಿಯ ಸಾಧ್ಯತೆಗಳನ್ನು ಕುರಿತು ಚಿಕಿತ್ಸಕ ಬುದ್ಧಿಯಿಂದ ಪರೀಕ್ಷೆಗೊಳಪಡಿಸುತ್ತಾರೆ. ಪಾಪ-ಪುಣ್ಯಗಳು ಎನ್ನುವ ಭ್ರಮೆಗಳ ಹಿಂದಿರುವ ಸತ್ಯವನ್ನು ಕಂಡುಕೊಳ್ಳಲು ವಚನ ಪ್ರತಿಭೆ ಸಹಾಯ ಮಾಡುತ್ತದೆ. ನಾನು ಕೀಳೆಂಬ ಮನೋಭಾವವನ್ನು ಸಮಾಜದಲ್ಲಿ ಎಂದಿಗೂ ಯಾರೂ ಅಭಿವ್ಯಕ್ತಿಸಬಾರದು ಎನ್ನುವ ಉದಾತ್ತ ಉದ್ದೇಶವನ್ನು ಸಂದೇಶವನ್ನಾಗಿ ನೀಡುತ್ತಾರೆ. ಜ್ಞಾನಕ್ಕೆ ಮನಸ್ಸನ್ನು ಈಡುಮಾಡಿಕೊಳ್ಳಬೇಕೆಂಬ ಪ್ರಜ್ಞಾಪ್ರವಾಹ ಪಾತಳಿಯ ಬದುಕನ್ನು ನಿರ್ಮಿಸಲು ಸಂಕಲ್ಪತೊಡುತ್ತಾರೆ.

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು ನಿಂದಲ್ಲಿ ನಿಲಲೀಯದು ಹೊಂದಿದಲ್ಲಿ ಹೊಂದಲೀಯದು, ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು, ಮುನ್ನಿನ ಸ್ವಭಾವವನು ... -ಎನ್ನುವ ಮಾತುಗಳಲ್ಲಿ ಅಳಿಮನದ ಭಕ್ತಿಯ ವ್ಯಾಖ್ಯಾನವನ್ನು ತುಂಬುತ್ತಾ ಹೋಗುತ್ತಾರೆ. ಜಗತ್ತಿನ ಮಹಾ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನವಾಗಿ ವಚನಕಾರರು ಆಲೋಚಿಸುವ ಕ್ರಮ ಮತ್ತೊಂದು ರೀತಿಯದ್ದಾಗಿದೆ. ಇಲ್ಲಿಯವರೆಗಿನ ನಿರೂಪಣೆಯು ವ್ಯಕ್ತಿನೆಲೆಯಲ್ಲಾಗಿದ್ದರೆ ಸಾರ್ವತ್ರಿಕ ನೆಲೆಯಲ್ಲಿ ಹೊಸ ವಿಧಾನಗಳನ್ನು ಪರಿವರ್ತನೆಗೆ ಬಳಸಿಕೊಳ್ಳುತ್ತಾರೆ. ಮನುಷ್ಯನ ಬದುಕಿನಲ್ಲಿ ಉದ್ಯೋಗ ಎನ್ನುವುದು ಬಹು ಮಹತ್ವದ್ದು. ಉದ್ಯೋಗ ಎನ್ನುವುದು ಅರ್ಥಶಾಸ್ತ್ರೀಯ ಪರಿಭಾಷಿಕೆಯಾದರೆ ಕಾಯಕ ಎನ್ನುವುದು ವಚನಶಾಸ್ತ್ರೀಯ ಪರಿಭಾಷೆ. ಉದ್ಯೋಗ ಮತ್ತು ಉತ್ಪಾದನೆಯು ಸಮಾಜದ ಮೌಲ್ಯಗಳನ್ನು ನಿರ್ಧರಿಸುತ್ತವೆ. ಉದ್ಯೋಗ ಮತ್ತು ಉತ್ಪಾದನೆಗಳು ಇಲ್ಲದ ಸಮಾಜದಲ್ಲಿ ಸಮಾಜ ಅಸಹಾಯಕತೆಯನ್ನು ಹಾಗೂ ಸಾಮಾಜಿಕ ಅಸಮಾನತೆಯನ್ನು ಹೊಂದಿರುತ್ತದೆ ಎನ್ನುವ ದೃಷ್ಟಿಕೋನ

ಶರಣರದ್ದು. ಶ್ರೀಮಂತರು ತಮ್ಮ ಹಣವನ್ನು ಎಲ್ಲಿ ತೊಡಗಿಸುತ್ತಾರೆ ಮತ್ತು ಅದು ಉತ್ಪಾದಿಸುವ ವಸ್ತು ಮತ್ತು ಮೌಲ್ಯಗಳು ಯಾವ ಬೆಲೆಯುಳ್ಳವುಗಳು ಎನ್ನುವ ಆಲೋಚನೆ ಶರಣರ ವೈಚಾರಿಕ ನಿಲುವುಗಳಿಗೆ ಮತ್ತಷ್ಟು ಹೊಳಪನ್ನು ನೀಡುತ್ತದೆ. ಅತಿವೃಷ್ಟಿ ಅನಾವೃಷ್ಟಿ ಭೂಕಂಪ, ಪ್ರವಾಹ, ಯುದ್ಧಗಳು, ಕ್ರಾಂತಿ ಮುಂತಾದ ಸಂದರ್ಭಗಳಲ್ಲಿ ಹಾಕಿದ ಬಂಡವಾಳವು ಏನಾಗುತ್ತದೆ ಎನ್ನುವ ಅರಿವಿಲ್ಲದೆ ಬಂಡವಾಳವನ್ನು ತೊಡಗಿಸುವುದು ಆರ್ಥಿಕ ಸಿದ್ಧಾಂತದಲ್ಲಿಯೂ ಕೂಡ ವಿಪರೀತ ಪರಿಣಾಮವನ್ನು ಬೀರುತ್ತದೆ. ಆದರೆ ಸಂಪತ್ತು ಎನ್ನುವ ಪ್ರತಿಮೆ ಈ ಎಲ್ಲ ಸಂದರ್ಭಗಳಲ್ಲಿ ಬಹುರೂಪಗಳನ್ನು ಪಡೆದುಕೊಳ್ಳುತ್ತದೆ. ಸಂಪತ್ತನ್ನು ವಿನಿಯೋಗಿಸುವ ವಿಧಾನಕ್ಕಾಗಿ ದಾಸೋಹ ಸಿದ್ಧಾಂತವನ್ನು ಶರಣರು ಪ್ರತಿಪಾದಿಸುತ್ತಾರೆ. ದಾಸೋಹವೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ. ಸಂಪತ್ತಿನ ವಿನಿಯೋಗವು ಅಥವಾ ಬಂಡವಾಳದ ಹೂಡುವಿಕೆಯು ದಾಸೋಹದಲ್ಲಿ ತೊಡಗಿದಲ್ಲಿ ಅದು ಅದ್ಭುತ ಲಾಭವನ್ನು ತಂದುಕೊಡುತ್ತದೆ ಎನ್ನುವುದು ವಚನಕಾರರ ಆಲೋಚನೆ.

ಆರ್ಥಿಕ ತತ್ವಗಳನ್ನು ಹರಿಬಿಡುವುದರ ಮೂಲಕ ಸಾಮಾಜಿಕ ಬದಲಾವಣೆಗೆ ಸಾರ್ವತ್ರಿಕ ಆಶಯಗಳನ್ನು ವಚನ ಪ್ರತಿಭೆಯು ಬಿತ್ತುತ್ತಾ ಹೋಗುತ್ತದೆ. ಇದಕ್ಕಿಂತ ಮುಖ್ಯವಾಗಿ ವಚನಪ್ರತಿಭೆಗೆ ಇದ್ದ ಮತ್ತೊಂದು ಅಜೆಂಡಾವೆಂದರೆ ಜಾತ್ಯಾತೀತ ಸಮಾಜದ ನಿರ್ಮಾಣ. ಅನಾದಿ ಕಾಲದಿಂದ ಮಾನವನನ್ನು ಕಾಡಿದ ಜಾತಿ ಮತ್ತು ವರ್ಣವ್ಯವಸ್ಥೆಯು ಮಾನವೇತಿಹಾಸದಲ್ಲಿ ಇಂದಿಗೂ ಕೂಡ ಜ್ವಲಂತ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಗಳ ಸಾಮಾಜಿಕ, ಶ್ರೇಣೀಕೃತ ವ್ಯವಸ್ಥೆಯ ವಿಘಟನೆಯ ಕನಸನ್ನು ಮೊದಲು ಕಂಡವರು 12ನೆಯ ಶತಮಾನದ ವಚನಕಾರರು. ಮಾನವನನ್ನು ಗೌರವಿಸದೆ ಅವರು ಮಾಡುವ ವೃತ್ತಿಯನ್ನು ಗೌರವಿಸದ ಕೀಳು ಅಭಿರುಚಿಗಳನ್ನು ಪ್ರಾಚೀನದಿಂದ ಅರ್ವಾಚೀನ ಭಾರತದ ಸಮಾಜ ಹೊಂದಿದೆ. ಇಂತಹ ಸಂದರ್ಭಗಳಲ್ಲಿ ಶರಣರು ಭಾರತೀಯ ಮೂಲ ಸಾಮಾಜಿಕ ಪ್ರವೃತ್ತಿಯನ್ನು ಬದಲುಗೊಳಿಸುವ ಪ್ರಯತ್ನಕ್ಕೆ ತೊಡಗಿದರು. ಹುಟ್ಟು, ಬಣ್ಣ, ವೃತ್ತಿ, ಭಾಷೆ, ಮತ, ಪಂಥ ಮುಂತಾದ ಶುಷ್ಕ ಅಂಶಗಳಿಗೆ ಪ್ರಾಧಾನ್ಯತೆಯನ್ನು ನೀಡಿ ಸಮಾಜದಲ್ಲಿ ಉಚ್ಚ-ನೀಚ, ಶ್ರೇಷ್ಟ-ಅನಿಷ್ಟ, ಪವಿತ್ರ-ಅಪವಿತ್ರ ಎಂಬ ತರತಮ ಭಾವನೆಗಳನ್ನು ತಂದುಕೊಂಡು ಸಮಾನತಾ ಸಿದ್ಧಾಂತವನ್ನು ನಿರ್ಲಕ್ಷಿಸಿದ ಭಾರತೀಯ ಸಮಾಜಕ್ಕೆ ಹೊಸ ಬೆಳಕನ್ನು ತಂದುಕೊಡಲು ಬಹುವಾಗಿ ಶ್ರಮಿಸಿದರು. ಆದರೂ ಅದು ಫಲಿಸದೆ ಇಂದಿಗೂ ಕೂಡ ಅಸಂಖ್ಯ ಗುಂಪುಗಳಾಗಿ ಮಾನವ ಕುಲ ಒಡೆದು ಹೋಗಿದೆ. ಇದರಿಂದಾಗಿ ಆರೋಗ್ಯಕರ ವಾತಾವರಣವನ್ನು ಸಾಮಾಜಿಕ ನೆಲೆಯಲ್ಲಿ ಕಂಡುಕೊಳ್ಳಲು ಆಗುತ್ತಿಲ್ಲವೆನ್ನುವ ಸತ್ಯ ಪ್ರತಿಯೊಬ್ಬನಿಗೂ ತಿಳಿದಿದೆ. ಚರಿತ್ರೆಯ ಸಂದರ್ಭಗಳನ್ನು ಗಮನಿಸಿದಲ್ಲಿ ಮಾನವೀಯತೆಯ ಅಧೋಗತಿಯ ಬೆಳವಣಿಗೆ ನಡೆಯುತ್ತಲೇ ಇದೆ. ಜಾತ್ಯತೀತ ಸಮಾಜದ ನಿರ್ಮಾಣದ ಕನಸುಗಳು ಕನ್ನಡಿಯೊಳಗಿನ ಗಂಟಾಗಿವೆ. ಸಮಾಜವನ್ನು ತಿದ್ದ ಹೊರಟವರು ಒಂದಿಲ್ಲೊಂದು ದೌರ್ಬಲ್ಯದಲ್ಲಿ ಬಿದ್ದು ಪ್ರಯತ್ನವನ್ನು ಅಲ್ಲಿಯೇ ಕೈಬಿಟ್ಟಿರುವ ಎಷ್ಟೋ ಸಂದರ್ಭಗಳನ್ನು ಕಾಣಬಹುದು. ಷಟ್ ಸ್ಥಲ ವಚನಗಳಲ್ಲಿ ಶರಣರ ಆಶಯಗಳು ಹಾಗೂ ಸಾಮಾಜಿಕ ಪ್ರತಿ ನಿರ್ಮಾಣದ ಕನಸುಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ.

ವಚನ ಪ್ರತಿಭೆಯ ಆಶಯಗಳು ಜಾತ್ಯತೀತ ಸಮಾಜದ ಪ್ರತಿನಿರ್ಮಾಣದ ಕನಸುಗಳನ್ನು ಕಂಡಿತು. ಇಲ್ಲಿ ಬೌದ್ಧಿಕ ಸ್ವಾತಂತ್ರ್ಯ ಮೀಮಾಂಸೆಯನ್ನು ಕಾಣಬಹುದು. ಇಂದಿಗೂ ಕೂಡ ಕುಲಮೂಲದಿಂದ ಬಂದ ದಾರ್ಶನಿಕನನ್ನು ಹಾಗೂ ಅವನ ಕುಲದ ಸತ್ಯವನ್ನು ಸಂಶೋಧಕನೊಬ್ಬನು ಅರುಹಿದರೆ ಸಮಾಜದ ಫ್ಯಾಸಿಸ್ಟ್ ಮನೋಧರ್ಮ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಸಂಶೋಧನೆ ಸತ್ಯವನ್ನೇ ಅರುಹುತ್ತಿದ್ದರೂ ಅದು ಸತ್ಯವನ್ನು ಬಚ್ಚಿಟ್ಟು, ವಾಸ್ತವವನ್ನು ತೋರಗೊಡದೆ ಅನೃತವನ್ನು ವಿಜೃಂಭಿಸುವುದು ಈ

ಸಮಾಜದ ನಿಲುವಾಗಿದೆ. ಇಂತಹ ನಿಲುವಿಗೆ ಭಂಗವನ್ನುಂಟು ಮಾಡಿದೆಯೆಂದರೆ 12ನೆಯ ಶತಮಾನದ ವಚನ ಪ್ರತಿಭೆ. ಇಂತೆಲ್ಲ ಸಂದರ್ಭಗಳಲ್ಲು ವಚನ ಪ್ರತಿಭೆಯ ಬೌದ್ಧಿಕ ಸ್ವಾತಂತ್ರ್ಯ ವಿಜೃಂಭಿಸಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಮಾನವನಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ ಹಾಗೂ ಬೌದ್ಧಿಕ ಸ್ವಾತಂತ್ರ್ಯಗಳು ಅತ್ಯವಶ್ಯಕ. ಶರಣರ ಆಶಯಗಳನ್ನು ಗಮನಿಸಿದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ವಿರಾಟ್ ನಿಲುವುಗಳು ವ್ಯಕ್ತವಾಗಿರುವುದು ಕಾಣಸಿಗುತ್ತದೆ. ವ್ಯಕ್ತಿ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಬೌದ್ಧಿಕ ಸ್ವಾತಂತ್ರ್ಯಗಳ ನಿರಂತರ ಹರಣವನ್ನು 21ನೆಯ ಶತಮಾನದಲ್ಲೂ ಢಾಳವಾಗಿ ಕಾಣಬಹುದಾಗಿದೆ. ಈ ಸ್ವಾತಂತ್ರ್ಯಗಳಿಲ್ಲದ ಮಾನವನ ಬದುಕು ಹೇಗಿರುತ್ತದೆಂಬುದು ಊಹಿಸಿಕೊಳ್ಳಲಿಕ್ಕೂ ಸಾಧ್ಯವಾಗದ ಸ್ಥಿತಿ. 12ನೆಯ ಶತಮಾನದ ಬಿಜ್ಜಳನು ನಿರಂಕುಶ ಪ್ರಭುತ್ವದ ಪ್ರತಿಮೆಯಾಗಿ ನಿಲ್ಲುತ್ತಾನೆ. ಪ್ರಜಾಕ್ಷೇಮ, ಪ್ರಜಾನುರಾಗಿ ಆಲೋಚನೆಗಳು ಅವನಲ್ಲಿ ಎಷ್ಟೇ ಇದ್ದರೂ ಇಂತಹ ಸಂದರ್ಭಗಳಲ್ಲಿ ಪ್ರಭುತ್ವ ಅಥವಾ ಒಡೆತನ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತದೆ. ಅಲ್ಲಿಯವರೆಗೂ ಮಾನವನ ಬದುಕಿನಲ್ಲಿ ಬೌದ್ಧಿಕ, ನೈತಿಕ, ಅಧ್ಯಾತ್ಮಿಕ, ಸಾಮಾಜಿಕ ಹಾಗೂ ಮಾನವಿಕ ಮೌಲ್ಯಗಳು ಎಂದು ಒಪ್ಪಿಕೊಂಡಿದ್ದ ವೇದಪ್ರಾಮಾಣ್ಯತೆಯನ್ನು ಪ್ರಶ್ನಿಸುವ, ಖಂಡಿಸುವ, ವಿರೋಧಿಸುವ, ನಿರಾಕರಿಸುವ ಮನೋಭಾವವನ್ನು ಪ್ರಭುತ್ವ ನಿಯಂತ್ರಿಸದೆ ಇರಲು ಸಾಧ್ಯವಿಲ್ಲ. ಪ್ರಭುತ್ವದ ಕೆಲಸ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಾಗಿರುತ್ತದೆ. ಅದು ಅವರ ಆದ್ಯ ಕರ್ತವ್ಯವೂ ಕೂಡ. ಪ್ರಭುತ್ವ ಇವುಗಳನ್ನು ಗಮನಿಸಲಿಲ್ಲವೆಂದೇನಿಲ್ಲ. ಇವೆಲ್ಲವುಗಳ ಹಿಂದೆ ನೈತಿಕ ಮೌಲ್ಯವನ್ನು ಒಪ್ಪಿಕೊಳ್ಳಬಹುದಾದ ಸಾಧ್ಯತೆಯಿದ್ದರೆ ಪ್ರಭುತ್ವ ಅಂತಹ ಪ್ರತಿಪಾದನೆಗಳನ್ನು ಒಪ್ಪಿಕೊಳ್ಳುತ್ತದೆ. ಹಾಗೂ ತನ್ನ ಫ್ಯಾಸಿಸ್ಟ್ ಮನೋಧರ್ಮವನ್ನು ಬದಲಿಸಿಕೊಳ್ಳುತ್ತದೆ. ಇಂತಹ ಪರಿವರ್ತನೆ ವಚನಪ್ರತಿಭೆಯಿಂದ ಸಾಧ್ಯವಾಗಿದೆ ಎಂದೆನಿಸದಿರದು.

ವ್ಯಕ್ತಿಸ್ವಾತಂತ್ರ್ಯವಿರದ ಬದುಕು ಒಂದರ್ಥದಲ್ಲಿ ಬದುಕೇ ಅಲ್ಲ. ಏಕೆಂದರೆ ಅದು ಎಲ್ಲಿರುವುದಿಲ್ಲವೋ ಅಲ್ಲಿ ಮಾನವನ ಬದುಕಿನ ಹಕ್ಕುಗಳ ಉಲ್ಲಂಘನೆ ನಿರಾತಂಕವಾಗಿ ನಡೆದುಬಿಡುತ್ತದೆ. ರೂಪ, ಯೌವ್ವನ, ಗುಣ, ವಿದ್ಯೆ, ಅಧಿಕಾರ, ಐಶ್ವರ್ಯ ಮುಂತಾದ ಉಳಿದ ಸಂಪತ್ತುಗಳು ವ್ಯಕ್ತಿಸ್ವಾತಂತ್ರ್ಯವಿಲ್ಲದ ಮೇಲೆ ನಿರರ್ಥಕವಾಗುತ್ತವೆ. ಸ್ವಾತಂತ್ರ್ಯವು ಮನುಷ್ಯನ ಬದುಕಿನ ಹಕ್ಕಿನ ಸ್ಥಾಯಿ ನಿದರ್ಶನವಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯದ ಮೂಲಕ ತಾನು ಹೊಂದುವ, ತಾನು ಆಲೋಚಿಸುವ ಹಾಗೂ ತಾನು ಧರಿಸುವ ಧರ್ಮದ ತಿಳುವಳಿಕೆಗಳನ್ನು ಹೊಂದಬಹುದಾಗಿರುತ್ತದೆ. ಮಾನವನ ಅಸ್ತಿತ್ವವು ತಾನು ಹೊಂದಿದ ಸ್ವಾತಂತ್ರ್ಯವನ್ನು ಅವಲಂಬಿಸಿರುತ್ತದೆ. ಶರಣರು ಇಂತಹ ಸಂದರ್ಭಗಳಲ್ಲಿ ಖಂಡಿತವಾಗಿ ಲೋಕವಿರೋಧಿ ಎನ್ನುವ ನಾಣ್ಣುಡಿಯಂತೆ ನಡೆದುಕೊಳ್ಳುತ್ತಾರೆ. ಪ್ರಭುತ್ವದ ಮುಂದೆ ಲೋಕವಿರೋಧಿಗಳಾಗುತ್ತಾರೆ. ಯಾರಿಗೆ ಯಾರು ಅಂಜಬೇಕು, ಯಾರಿಗೆ ಯಾರು ದೊಡ್ಡವರು ಎನ್ನುವ ಸಂದರ್ಭಗಳು ಬಂದಾಗಲೆಲ್ಲ ಅವರು ನೀಡಿದ ನಿಲುವುಗಳು ವಿಚಿತ್ರವಾಗಿ ಕಾಣಿಸುತ್ತವೆ.

ಯಜಮಾನ್ಯ ಸಂಸ್ಕೃತಿಗಳು, ಪ್ರಭುತ್ವ ಮತ್ತು ಹಿರಿತನಗಳು ತನ್ನ ಅಸ್ತಿತ್ವವನ್ನು ಹೇಗೆ ಪ್ರಕಟಪಡಿಸುತ್ತವೆ ಮತ್ತು ಅವುಗಳಿಗೆ ಪರ್ಯಾಯಗಳನ್ನು ಶರಣರು ಹೇಗೆ ಕಟ್ಟುತ್ತಾರೆ ಎನ್ನುವ ಸಂಗತಿಯನ್ನು ಗಮನಿಸಬಹುದು. ಶರಣರು ಅರುಹಿದ ನಿರ್ಭಿಡೆಯ ಮಾತುಗಳು ಪ್ರಭುತ್ವವನ್ನು ಅಲುಗಿಸದೆಯೇ ಬಿಟ್ಟಿಲ್ಲ. ಯಾವುದೇ ಪ್ರತಿಭಟನಾತ್ಮಕ ಚಳುವಳಿಗೆ ಪ್ರಭುತ್ವ ಎನ್ನುವುದು ಬಹುದೊಡ್ಡ ಕಂಟಕವಾಗಿ ನಿಲ್ಲುತ್ತದೆ. ಪ್ರತೀಕಾರ ಮನೋಭಾವಗಳು ಪ್ರಭುತ್ವದಿಂದ ನಡೆದುಬಿಡುತ್ತವೆ. ಇಂತಹ ಉದಾಹರಣೆಗಳನ್ನು ನಾವು ನೋಡಬಹುದು. ಸಾಕ್ರಟೀಸನ ಸಾವು, ಗೆಲಿಲಿಯೋನ ಸಾವಿನ ದೃಷ್ಟಾಂತಗಳು ಈ ಸತ್ಯವನ್ನು ಸಾರುತ್ತವೆ. ಶರಣರಿಗೆ

ಅರಸೊತ್ತಿಗೆಯನ್ನು ಬದಲುಗೊಳಿಸಬೇಕೆಂಬ ಉದ್ದೇಶವಿರಲಿಲ್ಲ. ವ್ಯವಸ್ಥೆಯನ್ನು ಅಂದರೆ ಅದರಲ್ಲೂ ಸಾಮಾಜಿಕ ವ್ಯವಸ್ಥೆಯನ್ನು ಬೌದ್ಧಿಕ ವ್ಯವಸ್ಥೆಯನ್ನು ಬದಲಿಸಬೇಕೆಂಬ ಉತ್ಕಟ ಇಚ್ಛೆ ಅವರದ್ದು. ಅವರ ಚಳುವಳಿ ಗೊತ್ತುಗುರಿಯಿಲ್ಲದ ಪ್ರಭುತ್ವ ವಿರೋಧಿ ಅಲೆಯ ಚಳುವಳಿಯಲ್ಲ. ಬಿಜ್ಜಳನ ಸಾಮ್ರಾಜ್ಯಶಾಹಿ ಧೋರಣೆಯನ್ನು ಅಥವಾ ಬಿಜ್ಜಳನ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ವಿರೋಧಿಸುವ ಪರಿ ಅವರದ್ದಲ್ಲ. ಬಿಜ್ಜಳನಾದಿಯಾಗಿ ಸಮಾಜದಲ್ಲಿ ಇರುವ ಪ್ರತಿಯೊಬ್ಬನೂ ಅರಿತು ಬಾಳಬೇಕು ಎಂಬುದು ಅದರ ಉದ್ದೇಶವಾಗಿತ್ತು. ಇದೇನೇಯಿದ್ದರೂ ಯುಗಧರ್ಮದ ಪ್ರಭುತ್ವದ ನಿಲುವುಗಳನ್ನು ಎದುರಿಸಿ ಒಂದು ನೈತಿಕ ಮೌಲ್ಯಪ್ರಜ್ಞೆ ದೃಢವಾಗಿ ಎದ್ದುನಿಲ್ಲುವುದು ಅತ್ಯಂತ ಕಷ್ಟದ ಕೆಲಸ. ಪ್ರಭುತ್ವವು ಬಲಪ್ರಯೋಗ ಮಾಡಿ ಶರಣರ ನಿರ್ಭಿಡೆಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಹುದಾಗಿತ್ತು, ಮೊಟಕು ಮಾಡಬಹುದಾಗಿತ್ತು, ಅಥವಾ ಅವುಗಳನ್ನು ಹರಿಯಬಿಡದಂತೆ ನೋಡಿಕೊಳ್ಳಬಹುದಾಗಿತ್ತು. ಈ ಕೆಲಸವನ್ನು ಪ್ರಭುತ್ವ ಮಾಡಿಲ್ಲವೆಂದೇನಿಲ್ಲ. ಆಕರ ಮತ್ತು ಚರಿತ್ರೆಯ ಅವಜ್ಞೆಯ ಕಾರಣದಿಂದ ಅವು ನಮಗೆ ಅಲಭ್ಯವಾಗಿರಬಹುದು. ಆದರೆ ಶರಣರ ನಿರ್ಭಿಡೆಯ ಅಭಿವ್ಯಕ್ತಿಗಳು ಇಂದಿಗೂ ಉಳಿದುಕೊಂಡು ವ್ಯವಸ್ಥೆಯ ಸಾಮಾಜಿಕ ಸುಧಾರಣಾ ಪ್ರಯತ್ನಗಳಾಗಿ ಉಳಿದುಕೊಂಡಿರುವುದು ಅವುಗಳ ಸಾಮರ್ಥ್ಯವೆಂದು ಬಗೆಯಬಹುದು.

ರಾಜಕೀಯ ಶಕ್ತಿಗಳ ಧ್ರುವೀಕರಣವು ಇಂತಹ ಚಳುವಳಿಯ ಆಶಯವನ್ನು ಸಾಮಾನ್ಯವಾಗಿ ಹಿಮ್ಮೆಟ್ಟಿಸುತ್ತವೆ. ಚಳುವಳಿಯ ನೇತಾರರು ಹಾಗೂ ರಾಜಪ್ರಭುತ್ವವು ಒಂದಾಗುವ ಸಂದರ್ಭಗಳನ್ನು ಚರಿತ್ರೆಯ ಬಹುಸಂದರ್ಭಗಳಲ್ಲಿ ಕಾಣುತ್ತೇವೆ. ನೇತಾರನಾದ ಬಸವಣ್ಣ ಬಿಜ್ಜಳನ ಮಂತ್ರಿಯಾಗಿಯೂ ಕಾರ್ಯ ನಿರ್ವಹಿಸುವುದರಿಂದ ಪ್ರಭುತ್ವದ ಕಾರ್ಯಾಂಗವು ಬಸವಣ್ಣನ ಕೈಯಲ್ಲಿದ್ದುದರಿಂದ ಇದು ಸಾಧ್ಯವಾಗದ ಸಂಗತಿಯಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಂದಿನ ಜನಗಳಿಗೆ ಅನುಭವಿಸಲು ಅಲಿಖಿತ ಅನುಮತಿಯನ್ನು ನೀಡಿದ್ದಿರಬಹುದೆಂಬುದು ಇದರಿಂದ ತಿಳಿದುಬರುತ್ತದೆ. ಇಡೀ ಆರ್ಷೇಯ ಪರಂಪರೆಯ ಜ್ಞಾನವನ್ನು ಅಲ್ಲಗಳೆಯುವುದು ಎಂದರೆ ಅದು ಸಣ್ಣ ಕೆಲಸವಲ್ಲ. ಅದಕ್ಕೂ ಹಿಂದಿದ್ದ ಸಾವಿರಾರು ವರ್ಷಗಳ ಚರಿತ್ರೆ ಅದರ ಅನುಷ್ಠಾನದ ವ್ಯವಸ್ಥೆಯನ್ನು ಅಲ್ಲಗಳೆದಂತೆಯೇ ಸರಿ. ವಚನಕಾರರಿಗೆ ಆ ಎಲ್ಲ ಜ್ಞಾನವು ತಿಳಿದಿರಲೇ ಬೇಕು. ಇಲ್ಲದಿದ್ದಲ್ಲಿ ಅವುಗಳ ಪ್ರಾಯೋಗಿಕ ಸಾಮರ್ಥ್ಯದಲ್ಲಿರುವ ಲೋಪಗಳನ್ನು ಎತ್ತಿ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ವೇದ, ಶಾಸ್ತ್ರ, ಪುರಾಣ, ಆಗಮಗಳನ್ನು ಧಿಕ್ಕರಿಸುವ ಧಾಷ್ಟ್ಯ ಮನೋಭಾವವನ್ನು ಶರಣ ಸಮುದಾಯ ಹೊಂದುತ್ತಿರಲಿಲ್ಲ. ಯಾವುದೋ ಒಂದು ಹಂತದಲ್ಲಿ ರಾಜೀಸೂತ್ರವೇರ್ಪಟ್ಟು ಧ್ರುವೀಕರಣ ಪ್ರಕ್ರಿಯೆ ನಡೆದುಹೋಗಿಬಿಡುತ್ತಿತ್ತು. ವಚನಪ್ರತಿಭೆಯ ಅಚಲ ನಿಲುವು ಇಂತಹ ಸಂಗತಿಗಳಿಗೆ ಅವಕಾಶಕೊಡದೆ ಅಭಿವ್ಯಕ್ತಿಯಾಯಿತು. ಇಂತಹ ಅಭಿವ್ಯಕ್ತಿಯಿಂದ ವಿಶ್ವದ ಸಾಮಾಜಿಕ ಸುಧಾರಣಾವಾದವು ಮತ್ತಷ್ಟು ಅರ್ಥಪೂರ್ಣವಾಗಿ ನಡೆಯತೊಡಗಿತು. ಇಂತಹ ಚಳುವಳಿಗಳಲ್ಲಿ ನೇತಾರ ಮನೋಭಾವವನ್ನು ಮರುಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಜಗತ್ತಿನ ಬಹುತೇಕ ಚಳುವಳಿಗಳು ನೇತಾರರನನ್ನು ಅನುಸರಿಸಿಯೇ ನಡೆಯುತ್ತವೆ. ಬಸವಣ್ಣ ನಾಯಕನಾಗಿ ಹೊರಹೊಮ್ಮಿದ್ದು ಆಕಸ್ಮಿಕವೆಂದು ಭಾವಿಸಬಹುದು. ಬಸವಣ್ಣನ ಮೌಲ್ಯಪ್ರಜ್ಞೆ ಹಾಗೂ ಅವನ ಖಚಿತ ನಿಲುವುಗಳು ಚಳುವಳಿಯನ್ನು ದಾರಿತಪ್ಪಿಸದೆ ನಡೆಸಲು ಅನುಕೂಲವಾದವು. ಒಂದು ಸಂಘಟನೆ ಅಥವಾ ಒಂದು ಚಿಂತನಾ ಪಂಥವೆಂದರೆ, ನಾಯಕತ್ವವನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವುದು ಎಂದರ್ಥ. ನಾಯಕನನ್ನು ಪ್ರಶ್ನಿಸುವ ಗೋಜಿಗೆ ವಚನಕಾರರು ಎಲ್ಲೂ ಹೋಗುವುದಿಲ್ಲ.

ವಚನಕಾರರ ಭಾಷೆ, ಮಾತು ಮತ್ತು ತರ್ಕ. ಮಾತು ಪೂರ್ಣಾರ್ಥದಿಂದ ಕೂಡಿರಬೇಕು. ಮನಸ್ಸಿಗೆ ತಾಗುವಂತಿರಬೇಕು. ಉನ್ನತವಾದ ರಸಭಾವಗಳನ್ನು ಚಿಂತನೆಗಳನ್ನು ಹೊಮ್ಮಿಸುವಂತಿರಬೇಕು. ಜೀವನದ ಪೂರ್ಣ ವಿಕಾಸಕ್ಕೆ ಆಡಿದ ಮಾತು

ಚಿಂತನಯೋಗ್ಯತೆಯನ್ನು ನೀಡುವಂತಿರಬೇಕು. ಆಡಿದ ನುಡಿ ಸಕಲರ ಮನಸ್ಸಿಗೆ ಹಿಡಿಸುವಂತಿರಬೇಕು. ಇದನ್ನು ಮನಗಂಡು ವಚನ ಎನ್ನುವ ಸಾಹಿತ್ಯ ಪ್ರಕಾರವನ್ನು ತನ್ನ ಪ್ರತಿಭಟನೆಯ ನೆಲೆಯಿಂದಲೇ ಆರಂಭಿಸುತ್ತಾರೆ. ಆವರೆಗೂ ಕನ್ನಡದಲ್ಲಿ ಪ್ರಚಲಿತವಿದ್ದ ಛಂದೋ ನಿಯಮಗಳನ್ನು ಗಾಳಿಗೆ ತೂರುತ್ತಾರೆ. ಛಂದೋನಿಯಮಗಳಿಗಿಂತ ರಸಭಾವ ಸ್ಫೂರ್ತಿಗಳು ಕಾವ್ಯದ ಪ್ರಮುಖ ಅವಶ್ಯಕತೆಯೆಂದು ಬಗೆಯುತ್ತಾರೆ. ತಿಳಿದ ಮಾತು ಪಾರಮಾರ್ಥಿಕ ಸತ್ಯ ಹಾಗೂ ಶಿವನೊಲುಮೆಗಳನ್ನು ಬಿಟ್ಟು ಉಳಿದಾವ ಸಾಹಿತ್ಯವನ್ನು ರಚಿಸುವ ಗೋಜಿಗೆ ಹೋಗುವುದಿಲ್ಲ. ನಿರ್ಭಿಡೆಯಿಂದ ವಿಚಾರವನ್ನು ವ್ಯಕ್ತಪಡಿಸಲಿಕ್ಕಾಗಿಯೆ ಬೌದ್ಧಿಕ ಸ್ವಾತಂತ್ರ್ಯದ ತೋರಿಕೆಗಾಗಿಯೆ ಶರಣರು ಇಂತಹ ಉಪಕ್ರಮಕ್ಕೆ ಇಳಿಯುತ್ತಾರೆ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಒಂದು ಹೃದ್ಯವಾದ ಪ್ರಕಾರವನ್ನು ಬೆಳಕಿಗೆ ತರುತ್ತಾರೆ.

ವಚನ ಪ್ರತಿಭೆಯ ಬೌದ್ಧಿಕ ಸ್ವಾತಂತ್ರ್ಯವು ಪ್ರತಿಭಟನಾತ್ಮಕ ಚಳುವಳಿಯಾಗಿತ್ತೇ ಎಂಬ ಪ್ರಶ್ನೆ ಇಲ್ಲಿ ಏಳದಿರದು. ಬಸವಣ್ಣನವರು ಹುಟ್ಟಿಬೆಳೆದ ಕಾಲವು ಅತ್ಯಂತ ಮೌಢ್ಯ ಮತ್ತು ಸಾಂಪ್ರದಾಯಿಕ ಕಾಲಘಟ್ಟವಾಗಿತ್ತು. ಅದರ ಐತಿಹಾಸಿಕ ಸಂದರ್ಭವನ್ನು ನೋಡಿದ್ದಲ್ಲಿ ಅಂದು ಜನತೆ ಆತ್ಮಗ್ಲಾನಿಯ ದೌರ್ಬಲ್ಯದಿಂದ ಬದುಕಿನ ಅರ್ಥವನ್ನು ಕಳೆದುಕೊಂಡಿದ್ದರು. ರಾಜಕೀಯ ಸಂದರ್ಭದಲ್ಲಿ ಚಾಲುಕ್ಯರು ಕಲಚುರಿಗಳು, ಹೊಯ್ಸಳರು ಅಲ್ಲದೆ ಸೇವುಣರ ನಡುವೆ ಪದೇ ಪದೇ ಯುದ್ಧಗಳು ಸಂಭವಿಸುತ್ತಿದ್ದವು. ಯುದ್ಧಗಳಿಂದಾಗಿ ಜನಸಾಮಾನ್ಯನ ಬದುಕು ಅತ್ಯಂತ ದಾರುಣವಾಗಿತ್ತು. ಸಾಮ್ರಾಜ್ಯಶಾಹಿ ಮಹತ್ವಾಕಾಂಕ್ಷಿಯ ಬಿಜ್ಜಳನು ಹಲವು ಶಕ್ತಿಗಳೊಂದಿಗೆ ರಾಜಕೀಯ ಧ್ರುವೀಕರಣವನ್ನು ಹೊಂದಿದ್ದನು. ಅಂದಿನ ಜನ ಬಸವಣ್ಣನಂಥ ಸಾಮುದಾಯಿಕ ನಾಯಕತ್ವವನ್ನು ಹೊರಬಲ್ಲ ವ್ಯಕ್ತಿತ್ವಕ್ಕಾಗಿ ಹಾತೊರೆಯುತ್ತಿದ್ದರು. ಸಮಾಜದ ಎಲ್ಲ ಆಯಾಮಗಳಲ್ಲು ಮೌಲ್ಯ ಕುಸಿತದ ದೌರ್ಭಾಗ್ಯ ಅಂದಿನ ಜನತೆಯ ನಡುವೆಯಿತ್ತು. ಕಂದಾಚಾರಗಳನ್ನು ಪ್ರತಿಭಟಿಸಿ ಆದರ್ಶಪ್ರಾಯವಾಗಿ ಜೀವನವನ್ನು ರೂಪಿಸಿಕೊಡುವ ಸಮತೆ, ಸಹಬಾಳ್ವೆ, ಹಾಗೂ ಸಹಕಾರ ತತ್ವಗಳಡಿ ಸಮಾಜವನ್ನು ರೂಪಿಸುವ ನೇತಾರ ಶಕ್ತಿಯೊಂದು ಅಂದು ಬೇಕಾಗಿತ್ತು. ಮಾನವ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯಗಳು ಇಲ್ಲದೇ ಇರುವ ಕಾಲಘಟ್ಟದಲ್ಲಿ ಬಸವಣ್ಣನವರಿಂದ ರೂಪಿತವಾದ ವಚನ ಚಳುವಳಿಯು ಒಂದರ್ಥದಲ್ಲಿ ಸಾಮಾಜಿಕ ಪರಿವರ್ತನೆಯ ಮತ್ತು ಪ್ರತಿನಿರ್ಮಾಣದ ನಿಲುವನ್ನು ವ್ಯಕ್ತಪಡಿಸುವ ಸಂಕಲ್ಪಶಕ್ತಿಯಾಗಿ ಮಾರ್ಪಟ್ಟಿತು. ಜಾತ್ಯಾಧಾರಿತ ಸಾಮಾಜಿಕ ವ್ಯವಸ್ಥೆಯಿಂದ ಸಮಾಜವನ್ನು ಹೊರತರುವ ನಿಟ್ಟಿನಲ್ಲಿ ಅವರು ಮಾಡಿದ ಚಳುವಳಿಯು ಯಶಸ್ವಿಯೆಂದೇ ಪರಿಗಣಿಸಬೇಕಾಗುವುದು. ಸಮಾಜವೆಂಬ ಶಕ್ತಿ ಬಸವಣ್ಣನವರ ಹಿಂದೆ ನಿಂತಿತು. ಪ್ರಭುತ್ವ, ಪುರೋಹಿತ ವರ್ಗ ಹಾಗೂ ಸಾಂಪ್ರದಾಯಿಕ ತಿಳುವಳಿಕೆ, ನಂಬಿಕೆಗಳನ್ನು ಅಲ್ಲಗಳೆದು ಆ ಜಾಗದಲ್ಲಿ ವೈಚಾರಿಕತೆ ಮೈವೆತ್ತುವಂತೆ ಮಾಡಬೇಕಾದ ಚಳುವಳಿಯನ್ನು ವಚನ ಪ್ರತಿಭೆ ರೂಪಿಸಿತು. ಇದೊಂದು ಸಾಂಸ್ಥಿಕ ಹೋರಾಟ. ಅನಪೇಕ್ಷಿತವಾದ ರಕ್ತಕ್ರಾಂತಿಯು ಆ ಸಂದರ್ಭದಲ್ಲಿ ನಡೆದುಹೋಯಿತು. ಇಂಥ ಸಂದರ್ಭದಲ್ಲಿ ಅಹಿಂಸೆಯನ್ನೇ ಖಡ್ಗವನ್ನಾಗಿಟ್ಟುಕೊಂಡ ವಚನ ಚಳುವಳಿಯು ತಾತ್ಕಾಲಿಕವಾಗಿ ತನ್ನ ವೈಫಲ್ಯವನ್ನು ಅನುಭವಿಸಿತು. ಇಂಥ ಚಳುವಳಿಗೆ ಬಸವಣ್ಣನವರು ಬಲಿಯಾದರು ಎಂಬ ಅನುಭಘವದ ಮಾತೊಂದು ಹೊರಬರುತ್ತದೆ. ಸಮಾನತೆಯ ಮೌಲ್ಯವು ಬಸವನಂತರದಲ್ಲಿಯೂ ಉದ್ದೀಪನಗೊಂಡು ಎದ್ದುಬರಬಹುದೆಂಬ ನಂಬಿಕೆ ಆಗ ದಟ್ಟವಾಗಿತ್ತು. ಸಾಂಸ್ಥಿಕ ರೂಪವಾಗಿ ಹೊರಹೊರಟ ಅನುಭವಮಂಟಪವು ತಿಳುವಳಿಕೆಯ ಕೇಂದ್ರವಾಗಿ ಬೌದ್ಧಿಕ ಶಕ್ತಿಯ ಟಂಕಶಾಲೆಯಾಗಿ ಪರಿವರ್ತಿತವಾಯಿತು. ವಚನ ಪ್ರತಿಭೆಯ ನಿಕಷಕ್ಕೆ ಬಂದವರು ವೈಚಾರಿಕವಾದಿಗಳಾದರು.